ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರು ನೀಡಿದ ರೂಲಿಂಗ್ ಪ್ರಶ್ನಿಸುವುದು ಸೂಕ್ತವಲ್ಲ ಬಿ.ಎ.ಸಿ. ಯಲ್ಲೂ ರಿಕ್ವೆಸ್ಟ್ ಮಾಡಿದ್ದೆ.

ಶ್ರೀ ಎಸ್. ಎಸ್. ಪಾಟೀಲ್ : ನಿಲುವಳಿ ಸೂಚನೆಯನ್ನು ಯಾವ ನಿಯಮದಡಿ ತೆಗೆದುಕೊಳ್ಳುವುದು? ಯಾವುದೇ ಸೂಚನೆ ಬಂದರೂ ಅದನ್ನು ನಿಯಮ 69ರಡಿ ಕೊಟ್ಟು ಬಿಡುತ್ತೀರಿ ಈ ಸರ್ಕಾರವೂ ಅಷ್ಟೇ ಮತ್ತೊಂದು ಸರ್ಕಾರವೂ ಅಷ್ಟೇ ಸರ್ಕಾರದಲ್ಲಿ ಯಾರೇ ಇದ್ದರೂ ಅದನ್ನೇ ಮಾಡುವುದು. ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದಲ್ಲಿದ್ದಾಗ ಅದನ್ನೇ ಮಾಡಿದ್ದು ಹಾಗಾದರೆ ನಿಲುವಳಿ ಸೂಚನೆಯೆಂದು ತಾವು ಯಾವುದನ್ನು ತೆಗೆದು ಕೊಳ್ಳುತ್ತೀರಿ? ಯಾವ ವಿಷಯ ಬರುತ್ತದೆ? ಇದು ಬಹಳ ಮಹತ್ವವಾದ ವಿಚಾರವಾದುದರಿಂದ ತೆಗೆದುಕೊಳ್ಳಬೇಕೆಂದು ನಿಯಮಾವಳಿಯಲ್ಲಿ ಸ್ಪಷ್ಟವಾಗಿ ತಿಳಿಸಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಮ್ಮ ಗೆಳೆಯರಾದ ಮಾಧುಸ್ವಾಮಿ ಹಾಗೂ ವಾಟಾಳ್ ನಾಗರಾಜ್ ಅವರುಗಳನ್ನು ಕುರಿತು ನಮಗೇಕೆ ಸಹಾಯ ಮಾಡುವುದಿಲ್ಲವೆಂದು ಕೇಳಿದೆ. ಅವರು ನನಗೆ ಹೇಳಿದರು ನೀವು ಒಳಗಡೆ ಒಪ್ಪಿಕೊಂಡು ಬಂದಿರಿ. ನಾವೂ–ಅವರೂ ಚರ್ಚೆ ಮಾಡಿದ್ದು ಇಲ್ಲ, ಒಳಗಡೆ ಚರ್ಚೆಯಾಗಲಿಲ್ಲ. ನಾಯಕರೊಬ್ಬರೇ ಚರ್ಚೆ ಮಾಡುವು ದಿಲ್ಲವೆಂದು ತೀರ್ಮಾನವಾಗಿತ್ತೆಂದರು. ನನಗೆ ತಿಳಿದಂತೆ ಅವರೊಬ್ಬರೇ ಪ್ರಸ್ತಾಪ ಮಾಡಬಹು ದೆಂದು ತೀರ್ಮಾನವಾಗಿರಲಿಲ್ಲ. Since my other friends also say, ನಮಗೆ ಇದರಲ್ಲಿ ಪಟ್ಟು, ಪ್ರತಿಷ್ಠೆ ಅಂತಹುದ್ದೇನೂ ಇಲ್ಲ ನಾವು ಬೇರೆ ಬೇರೆ ತರಹದ ಅಭಿಪ್ರಾಯಗಳನ್ನಿಟ್ಟುಕೊಂಡು ಸದನಕ್ಕೆ ಬರುವವರು ಇಲ್ಲಿ ಕಲಾಪ ಆಗುವುದು ಮುಖ್ಯ ತಾವು ತೀರ್ಪು ಕೊಟ್ಟಿದ್ದೀರಿ. ಇನ್ನು ನಾವು ಅದರ ಮೇಲೆ insist ಮಾಡುವುದಿಲ್ಲ. ಕಾರ್ಯಕ್ರಮ ನಡೆದುಕೊಂಡು ಹೋಗಲಿ.

Mr. Speaker : Thank you

2. ಅಧ್ಯಕ್ಷರ ಅಪ್ಪಣೆಯ ಮೇರೆಗೆ :

(ಅ) ವಿಷಯ : ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಯಾಗಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ನಾವು ಕಪ್ಪು ಬಟ್ಟೆ ಹಾಕಿಕೊಂಡು ಬಂದಿದ್ದೇವೆ. ಅದರ ಬಗ್ಗೆ ನೀವು ಕೇಳುತ್ತೀರೆಂದು ತಿಳಿದಿದ್ದೆವು. ನೀವು ಕೇಳಲಿಲ್ಲ ಇದು ಅತ್ಯಂತ ನೋವಿನ ಸಂಗತಿ.

ಅಧ್ಯಕ್ಷರು : ಶ್ರೀ ರಾಮರೆಡ್ಡಿಯವರು ಯಾವಾಗಲೂ ಕಪ್ಪು ಬುಷ್ ಷರ್ಟ್ ಧರಿಸುತ್ತಾರೆ. ಅವರ ಪ್ರಭಾವದಿಂದ ನೀವೂ ಹಾಕಿರಬಹುದೆಂದುಕೊಂಡೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಕಪ್ಪು ಬಾವುಟ ಏಕೆ ಹಾಕಿಕೊಂಡಿದ್ದೇವೆಂದು ನೀವು ಕೇಳಬೇಕಾಗಿತ್ತು ಕೇಳಲಿಲ್ಲ.

ಅಧ್ಯಕ್ಷರು : ಆಯಿತು, ನೀವು ಕಪ್ಪು ಬಟ್ಟೆ ಹಾಕಿಕೊಂಡು ಬಂದಿರುವ ಕಾರಣ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗಿರುವುದನ್ನು ಪ್ರತಿಭಟಿಸುವುದಕ್ಕೋಸ್ಕರ ನಾವೆಲ್ಲರೂ ಕಪ್ಪು ಬಾವುಟ ಧರಿಸಿ ಇಲ್ಲಿ ಕುಳಿತಿದ್ದೇವೆ. ನಮ್ಮನ್ನು ತಾವು ಕೇಳುತ್ತೀರಿ ಎಂದು ತಿಳಿದಿದ್ದೆವು. ತಾವು ಕೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆಯನ್ನು ನಿರಂತರವಾಗಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಾಟಾಳ್ ನಾಗರಾಜ್‌ರವರು ಇಂಡಿಪೆಂಡೆಂಟ್. ಅವರಿಗೆ ಮಾತನಾಡಲು ಹಕ್ಕು ಇದೆ. ಏಕೆಂದರೆ ಅವರು ಸ್ವತಂತ್ರರು, ಏನು ಬೇಕಾದರೂ ಮಾತನಾಡಬಹುದು. ಯಾವುದೇ ವಿಷಯಗಳನ್ನೂ ಪ್ರಸ್ತಾಪಿಸಬಹುದು. ಆದರೆ ಶ್ರೀರಾಮರೆಡ್ಡಿ ಮತ್ತು ರಾಜೇಂದ್ರನ್‌ರವರು ನಮ್ಮೊಂದಿಗೆ ಅಂದರೆ ಕೇಂದ್ರದಲ್ಲಿರುವ ಯುಪಿಎ ಸರ್ಕಾರದಲ್ಲಿ ಸ್ನೇಹವಿಟ್ಟುಕೊಂಡಿದ್ದಾರೆ. ಪ್ರೀತಿ ನಮ್ಮೊಂದಿಗಿಟ್ಟುಕೊಂಡು ಲಗ್ನವನ್ನು ವಾಟಾಳ್ ನಾಗರಾಜ್ ಅವರೊಂದಿಗೆ ಮಾಡಿಕೊಂಡರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ನಮ್ಮ-ನಮ್ಮಲ್ಲಿ ತಂದಿಡುವುದು ಬೇಡ.

ಅಧ್ಯಕ್ಷರು : ಲಗ್ನ ನಿಮ್ಮ ಜೊತೆ, ಕೂಡಿಕೆ ಅವರ ಜೊತೆ!

ಶ್ರೀ ವಾಟಾಳ್ ನಾಗರಾಜ್ : ನಮ್ಮ ನಮ್ಮಲ್ಲಿ ಭೇದ-ಭಾವ ತರುವುದು ಬೇಡ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಕೇಂದ್ರದಲ್ಲಿರುವ ಯುಪಿಎ ಸರ್ಕಾರಕ್ಕೆ ಬೆಂಬಲ ಕೊಡುತ್ತಿರುವುದು ನಿಜ ಮತ್ತು ಪೆಟ್ರೋಲ್, ಡೀಸೆಲ್ ಬೆಲೆ ಏರಬಾರದೆಂದು ನಾವು ಪ್ರತಿಭಟಿಸು ತ್ತಿರುವುದು ನಿಜ.

ಶ್ರೀ ವಾಟಾಳ್ ನಾಗರಾಜ್ : ನಾವೇಕೆ ಕಪ್ಪು ಬಾವುಟ ಹಾಕಿಕೊಂಡು ಬಂದಿದ್ದೇವೆಂದು ನೀವು ಕೇಳಲಿಲ್ಲ. ಆದರೂ ನಾವೇ ಅದನ್ನು ತಮ್ಮಲ್ಲಿ ಹೇಳಿಕೊಳ್ಳುತ್ತೇವೆ. ನಮ್ಮ ವಿಚಾರವನ್ನು ನಾವೇ ಹೇಳುತ್ತೇವೆ. ಇದು ಅತ್ಯಂತ ಗಂಭೀರವಾದ ಪ್ರಶ್ನೆಯಾಗಿದೆ. ದೇಶದಲ್ಲಿ ಎಷ್ಟು ಬಾರಿ ....

ಅಧ್ಯಕ್ಷರು : ಅದರ ಬಗ್ಗೆ ಮಾತನಾಡಲು ನಿಮಗೆ ನಾನು ಅನಂತರ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಪೆಟ್ರೋಲ್, ಡೀಸೆಲ್ ಬೆಲೆ ಏರಿಸಿ ಜನಸಾಮಾನ್ಯರ ಬದುಕನ್ನು ಹರಿದು ಚಿಂದಿ ಮಾಡಿರುವ ಸರ್ಕಾರದ ವಿರುದ್ಧ ನಾವೆಲ್ಲರೂ ಸೇರಿ ಪ್ರತಿಭಟಿಸ ಬೇಕೆಂದಿದ್ದೇವೆ. ಆದ ಕಾರಣ, ಕೇಂದ್ರ ಸರ್ಕಾರದ ವಿರುದ್ಧ ಇಲ್ಲಿ ನಿರ್ಣಯವೊಂದನ್ನು ತರಬೇಕೆಂದು ನಾವು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ಪೆಟ್ರೋಲ್ ಡೀಸೆಲ್ ಬೆಲೆ ಏರಿಸಿರುವ ಬಗ್ಗೆ ತಾವೇ ಇಲ್ಲಿ ನೇರವಾಗಿ ನಿರ್ಣಯ ಮಂಡಿಸಿದರೆ ಒಳ್ಳೆಯದು.

ಅಧ್ಯಕ್ಷರು : ಆ ಕುರಿತು ಪ್ರಸ್ತಾಪಿಸಲು ಮಧ್ಯಾಹ್ನ ತಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಏಕೆಂದರೆ, ಈ ದೇಶದ ಜನತೆ, ಬಡವರು, ಮಧ್ಯಮ ವರ್ಗದವರು, ಜನಸಾಮಾನ್ಯರುಗಳಿಗೆ ಬೆಲೆ ಏರಿಕೆಯಿಂದಾಗಿ ತೀವ್ರ ಹೊರೆಯಾಗಿದೆ. ನಾಳೆ ಬೆಳಗ್ಗೆ ಬಸ್ ದರ ಏರಿಸಿದರೆ...

ಅಧ್ಯಕ್ಷರು : ನಾನು ಮಧ್ಯಾಹ್ನ ತಮಗೆ ಅವಕಾಶ ಮಾಡಿಕೊಡುತ್ತೇನೆ. Let us go to the Bill

ಶ್ರೀ ವಾಟಾಳ್ ನಾಗರಾಜ್ : ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ರವರು ಸಭಾತ್ಯಾಗ ಮಾಡಿದರು)

ಶ್ರೀ ಆರಗಜ್ಞಾನೇಂದ್ರ : ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರತದ್ಧ ಪ್ರಸ್ತಾಪಿಸುವುದಕ್ಕೆ ತಾವು ಖಂಡಿತವಾಗಿಯೂ ಮಧ್ಯಾಹ್ನ ಅವಕಾಶ ಮಾಡಿಕೊಡಬೇಕು. ಜನಜೀವನದ ಮೇಲೆ ಬಹಳ ದುಷ್ಪರಿಣಾಮವುಂಟಾಗಿದೆ. ಕೇಂದ್ರ ಸರ್ಕಾರದ ವಿರುದ್ಧ ನಿರ್ಣವೊಂದನ್ನು ತರುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಕಮ್ಯುನಿಸ್ಟರು ತಾವು ನೀಡಿರುವ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದು. ಶ್ರೀರಾಮರೆಡ್ಡಿಯವರೆ. ಅವರಿಗೆ ಕೊಟ್ಟಿರುವಂತಹ ಬೆಂಬಲವನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು. ಯಾವಾಗಲೂ ಸುಮ್ಮನೆ ಪ್ರತಿಭಟನೆ ಮಾಡುವುದು ಅವರಿಗೆ ಬೆಂಬಲ ಕೊಡುವುದು, ಕುಮ್ಮಕ್ಕು ಕೊಡುವುದನ್ನು ಮಾಡುತ್ತಿದ್ದೀರಿ.

ಶ್ರೀ ಜಿ.ವಿ. ರಾಮರೆಡ್ಡಿ : ಅವರು ಎಕ್ಸೆಸ್ ಡ್ಯೂಟಿ ಮತ್ತು ಟ್ಯಾಕ್ಸ್ ಕಡಿಮೆ ಮಾಡಿದರೆ ಇಲ್ಲಿ ರೆಡ್ಯೂಸ್ ಆಗುತ್ತದೆ. ಬೇರೆ ರಾಜ್ಯಗಳಿಗಿಂತಲೂ ಕರ್ನಾಟಕದಲ್ಲಿ ಜಾಸ್ತಿ ಇದೆ.

ಅಧ್ಯಕ್ಷರು : ತಾವು ಮಧ್ಯಾಹ್ನ ಮಾತನಾಡಿ ಆಗ ಬೇರೆಯವರಿಗೂ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

12.30. ಪಿ.ಎಂ

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ತಾವು ನನ್ನನ್ನು ಕರೆದಿದ್ದಕ್ಕೆ ತಮ್ಮನ್ನು ಅಭಿನಂದಿಸುತ್ತಾ ನಮ್ಮದೂ ಒಂದು ಸಾಂಕೇತಿಕ ಪ್ರತಿಭಟನೆ ಎಂದು ಇಲ್ಲಿ ಅನ್ನಿಸಬಹುದು. ಆದರೆ, ಇತ್ತೀಚಿನ ದಿನಗಳಲ್ಲಿ ಸರ್ಕಾರಗಳು ಯಾವುದೇ ಬೆಲೆ ಹೆಚ್ಚಳಕ್ಕೂ ನಮಗೂ ಸಂಬಂಧವಿಲ್ಲವೆಂಬ ಧೋರಣೆಯನ್ನು ಆಚರಣೆಗೆ ತಂದಂತೆ ಕಾಣುತ್ತಿರುವುದರ ವಿರುದ್ಧ ನಾವು ಪ್ರತಿಭಟಿಸಲೇಬೇಕಾಗಿದೆ. ಪೆಟ್ರೋಲ್, ಡೀಸೆಲ್, ಬಂಗಾರದ ಬೆಲೆ ಹೀಗೆ ಎಲ್ಲಾ ಬೆಲೆಗಳೂ ಸಾರಾಸಗಟಾಗಿ ಹೆಚ್ಚುತ್ತಾ ಹೋದರೆ ಜನಜೀವನ ಹೇಗೆ ಸಾಗಿಸಬೇಕೆಂಬ ಬಗ್ಗೆ ಎಲ್ಲಾದರೂ ಒಂದು ಕಡೆ ಕುಳಿತುಕೊಂಡು ಯೋಚನೆ ಮಾಡುವಂತಹ ಸ್ಥಿತಿಯನ್ನು ಸರ್ಕಾರಗಳು ಧಾಟಿ ಹೋಗಿರುವುದರಿಂದ ನಮಗೆ ಇಲ್ಲಿ ಪ್ರತಿಭಟನೆ ಮಾಡದೆ, ಬೇರೆ ಮಾರ್ಗ ಇಲ್ಲದೆ ತಮ್ಮೆದುರಿಗೆ ಪ್ರತಿಭಟಿಸುತ್ತಿದ್ದೇವೆ. ಕನಿಷ್ಠ ಈ ಶಾಸನಸಭೆಯಿಂದಲಾದರೂ ಒಂದು ಸಂದೇಶ ಹೋಗಬೇಕು. ಎಲ್ಲಾದರೂ ಒಂದು ಕಡೆ ಮಧ್ಯಮ ವರ್ಗದವರನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ದಾಕ್ಷಿಣ್ಯವಾದ ನಿರ್ಣವೊಂದನ್ನು ತೆಗದುಕೊಳ್ಳಬೇಕೆಂದು ಅವರು ಹೇಳಿದರು. ಪೆಟ್ರೋಲ್ ಬೆಲೆಯನ್ನು ಬೇರೆ ರಾಷ್ಟ್ರಗಳು ಹೆಚ್ಚು ಮಾಡಿವೆ, ಮನಗೆ ಅನಿವಾರ್ಯವಿದ್ದರೂ ಕೂಡ ಮತ್ತೆ ಹೇಗಾದರೂ ಇದನ್ನು ನಿಯಂತ್ರಣಕ್ಕೆ ಇಟ್ಟುಕೊಳ್ಳಬೇಕೆಂಬ ಒಂದು ಸಂದೇಶವನ್ನು ದಯವಿಟ್ಟು ಈ ಶಾಸನಸಭೆಯಿಂದ ತಾವು ಕೇಂದ್ರ ಸರ್ಕಾರಕ್ಕೆ ಕಳೂಹಿಸಿಕೊಡುವ ಕೃಪೆ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಪ್ರತಿಭಟನೆ ಮಾಡುವುದು ಸರಿಯಲ್ಲವೆಂದು ಮಾನ್ಯ ಖರ್ಗೆಯವರು ಹೇಳಿದರು. ಅದನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ. ನಾವು ಯು.ಪಿ.ಎ. ಸರ್ಕಾರಕ್ಕೆ ಬೆಂಬಲ ಕೊಡುತ್ತಿರುವುದು ಬಾಹ್ಯದಿಂದ ನಾವು ಯು.ಪಿ.ಎ. partners ಅಲ್ಲ We are not the partners of the U.P.A. ನಾವು ಹೊರಗಡೆಯಿಂದ ಅವರಿಗೆ ಬೆಂಬಲ ಕೊಡುತ್ತಿದ್ದೇವೆ, Only to avoid the communal forces from getting the power ಎಂದು ಆದರೆ ಇವರು ಮಾಡಿರುವ ಜನವಿರೋಧಿ ಕೆಲಸಗಳಿಗೆಲ್ಲಾ ನಾವು ಬೆಂಬಲ ಕೊಡುತ್ತೇವೆಂದು ನಾವು ಯಾವತ್ತೂ ಹೇಳಲಿಲ್ಲ. ಅವರು ಮಾಡಿದಂಥ ಎಲ್ಲಾ ಜನವಿರೋಧಿ ನೀತಿಗಳನ್ನು ಪ್ರತಿಭಟನೆ ಮಾಡಿದ್ದೇವೆ. ಈವತ್ತು ವಿಧಾನಸಭೆಯಲ್ಲಿ ಕೂಡ ನಾವು ಏಕೆ ಹೇಳುತ್ತಿದ್ದೇ ವೆಂದರೆ.ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಏನು ಏರಿಸಿದ್ದಾರೆ, actually ಅದು

ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಏನು ಬೆಲೆ ಏರುತ್ತಿದೆ ಎಂದು ಹೇಳುತ್ತಿದ್ದಾರೆ ಆ ಬೆಲೆ ಏರಿದಾಗಲೂ ಕೂಡ ನಮಗೆ ಇಲ್ಲಿ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಗಳು ಹಾಕುತ್ತಿರತಕ್ಕ ಎಕ್ಸ್ಸ್ ಮತ್ತು ಕಸ್ಟ್ಸಂ ಡ್ಯೂಟಿಗಳೇನಿದೆ ಅದರ ಎರಡರಷ್ಟಿದೆ. ಉದಾಹರಣೆಗೆ ಡೀಸೆಲ್ ರೇಟ್ ಈಗ ಒಂದು ಬ್ಯಾರಲ್‌ಗೆ 45 ಸಾವಿರ ಡಾಲರ್ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಜಾಸ್ತಿಯಾಗಿದೆ. ಅದೆಲ್ಲವನ್ನೂ ಲೆಕ್ಕ ಹಾಕಿದರೆ ಈವತ್ತು ಏನು ಜಾಸ್ತಿ ಮಾಡಿದ್ದಾರೆ ಅದನ್ನೂ ಸೇರಿ ನಮ್ಮ ದೇಶದಲ್ಲಿ 20 ರೂಪಾಯಿಗೆ ಡೀಸೆಲ್‌ನ್ನು ಮಾರಾಟ ಮಾಡಬೇಕು 18 ರೂಪಾಯಿ ಏನು ಜಾಸ್ತಿಯಾಗಿದೆ ಅದು ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಗಳು ಹಾಕುತ್ತಿರುವ ಕಸ್ಟ್ಸಂ ಮತ್ತು ಎಕ್ಸ್ಸ್ ಡ್ಯೂಟಿ ನಾವು ಏನು ಹೇಳುತ್ತಿದ್ದೇವೆಂದರೆ, ನೀವು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎರಿಕೆಯಾಗುತ್ತಿರತಕ್ಕ ಹೆಸರಿನಲ್ಲಿ ಬೆಲೆ ಜಾಸ್ತಿ ಮಾಡಿದರೆ ಇಡೀ ಜನಜೀವನ ಅಸ್ತವ್ಯಸ್ತವಾಗುತ್ತದೆ. ಎಲ್ಲಾ ವಿಭಾಗದ ಜನರ ಮೇಲೆ ಇದರ ಪರಿಣಾಮವಾಗುತ್ತದೆ.ಅದನ್ನು ಕರ್ಟೇಲ್ ಮಾಡಬೇಕಾದರೆ ನೀವು ಕಸ್ಟ್ಸಂ ಡ್ಯೂಟಿ ಮತ್ತು ಎಕ್ಸ್ಸ್ ಡ್ಯೂಟಿಯನ್ನು ರೆಡ್ಯೂಸ್ ಮಾಡಿ ಎಂದು ಹೇಳಿದ್ದೇವೆ. ಪರ್ಯಾಯವಾದ ಸಲಹೆಯನ್ನು ನಾವು ಕೊಟ್ಟಿದ್ದೇವೆ. ಇದು ಒಂದು ಕಡೆ ಅದನ್ನು ಒಪ್ಪಲಿಲ್ಲ. ರಾಜ್ಯ ಸರ್ಕಾರದ ಭಾಗವೇನಿದೆಯೆಂದರೆ, ಪರ್ಟಿಕ್ಯುಲರ್‌ಲಿ ಕರ್ನಾಟಕ ರಾಜ್ಯದ್ದು ಏನಿದೆ ಎಂದರೆ, ಪಕ್ಕದ ರಾಜ್ಯಗಳಾದ ಆಂಧ್ರ, ತಮಿಳುನಾಡು ಮತ್ತು ಕೇರಳಗಳಿಗೆ ಕಂಪೇರ್ ಮಾಡಿದರೆ, ನಮ್ಮಲ್ಲಿ ಕಸ್ಟ್ಸಂ ಮತ್ತು ಎಕ್ಸ್ಸ್ ಡ್ಯೂಟಿ ಜಾಸ್ತಿ ಇದೆ. ಅಲ್ಲಿಗೂ ಇಲ್ಲಿಗೂ ಡೀಸೆಲ್ ಬೆಲೆಯಲ್ಲಿ ಎರಡು ರೂಪಾಯಿ ವ್ಯತ್ಯಾಸವಿದೆ. ಅಂದರೆ ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಕಸ್ಟ್ಸಂ ಮತ್ತು ಎಕ್ಸ್ಸ್ ಡ್ಯೂಟಿ ಆಗಿದೆ. ಆದ್ದರಿಂದ ಕರ್ನಾಟಕ ರಾಜ್ಯದ ಕನಿಷ್ಟ ಈ ಸರ್ಕಾರವಾದರೂ.. ಮಾನ್ಯ ಯಡಿಯೂರಪ್ಪನವರು ಈ ಕಷ್ಟವನ್ನು ಅನುಭವಿಸಿದ್ದಾರೆ. ಅವರು ಈ ಕಸ್ಟ್ಸಂ ಮತ್ತು ಎಕ್ಟ್ಸಸ್ ಡ್ಯೂಟಿಯನ್ನು ಕಟ್ ಮಾಡಿ ಕರ್ನಾಟಕ ರಾಜ್ಯದ ಜನತೆಗೆ ರಕ್ಷಣೆಗೆ ಬರಬೇಕೆಂದು ತಮ್ಮ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೇ, Former speaker ರಮೇಶ್ ಕುಮಾರ್‌ರವರು ಹೇಳಿದ್ದು ನಿಜ. ನಾನು ಬಂದು ಕುಳಿತ ತಕ್ಷಣ ನನಗೆ ಕಟ್ ಘಾಡಿ ಒಂದು ಅರ್ಧ ಬಟ್ಟೆಯನ್ನು ಕೊಟ್ಟರು. ಆದ್ದರಿಂದ ಅವರ ಜೊತೆಗೆ ನನ್ನ ಬೆಂಬಲವಿರಬೇಕು ಮಾನ್ಯ ಖರ್ಗೆ ಸಾಹೇಬರು ಏನು ಹೇಳಿದರು ನಾವು Republic Party of India, supporters of Congress, definitely there is no

doubt about it But ಇವರು ನಮ್ಮನ್ನು ಅಷ್ಟು ಸುಲಭವಾಗಿ ಬಿಡುವುದಿಲ್ಲ. ನಮ್ಮ ಜೊತೆಯೇ ಇರಿ ಎಂದು ಹೇಳುತ್ತಾರೆ. ಆದ್ದರಿಂದ ನಮ್ಮ ಶ್ರೀರಾಮರೆಡ್ಡಿ, ಮಾಧುಸ್ವಾಮಿ ನಮ್ಮ ಸೀನಿಯರ್ ಕೊಲೀಗ್ಸ್ ರವರುಗಳೇನು ಹೇಳಿದರು ಅದು ನಿಜ. ಸಾಮಾನ್ಯ ಜನರು ಬಹಳ ಕಷ್ಟಪಡುತ್ತಿದ್ದಾರೆ.ತಾವು ರಾಜ್ಯ ಸರ್ಕಾರದವರು ಎನಾದರೂ ಎಕ್ಸ್ಸ್ ಮತ್ತು ಕಸ್ಟ್ಸ್ ಡ್ಯೂಟಿಯನ್ನು ಕಡಿಮೆ ಮಾಡಿ ಜನರಿಗೆ ಒಳ್ಳೆಯದನ್ನು ಮಾಡಬೇಕು. ಏಕೆಂದರೆ ತಮಗೆ ಯಾವಾಗಲೂ ಬಡವರು ಅಂದರೆ ಬಹಳ ಪ್ರೀತಿ. ಬಡವರ ಎಂದರೆ ಪ್ರಾಣವನ್ನೇ ಕೊಡುವವರು. ಆದ್ದರಿಂದ ನೀವು ಅದನ್ನು ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಮಾಡಿ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ನಾನು ಕಪ್ಪು ಬಟ್ಟೆಯನ್ನು ಹಾಕಿಕೊಂಡಿಲ್ಲ. ಆದರೂ ನನ್ನ ಪ್ರತಿಭಟನೆಯನ್ನು ಕೇಂದ್ರದ ವಿರುದ್ಧ ಮಾಡುವುದಕ್ಕೆ ಇಲ್ಲಿ ಅವಕಾಶ ಇಲ್ಲ. ಆದರೆ ರಾಜ್ಯ ಸರ್ಕಾರ, ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ ವ್ಯಾಟ್‌ನಲ್ಲಿ ನೀವು ತೆರಿಗೆಯನ್ನು ಇಡೀ ದೇಶಕ್ಕೆ ಸಮಾನವಾಗಿ ಮಾಡಬೇಕೆಂದು ತಂದಿದ್ದೀರಿ. ಅದೇ ರೀತಿಯಲ್ಲಿ ಈ ಡೀಸೆಲ್ ಮತ್ತು ಪೆಟ್ರೋಲ್ ದರವನ್ನು ಸಮಾನವಾಗಿ ಮಾಡಬೇಕು. ಇಲ್ಲದಿದ್ದರೆ ಪಕ್ಕದ ರಾಜ್ಯದಲ್ಲಿ ಅದನ್ನು ಹಾಕಿಕೊಂಡು ಇಲ್ಲಿ ಪಾಸ್ ಆಗುತ್ತಾರೆ. ನಮ್ಮ ರಾಜ್ಯದ ರಸ್ತೆಯಲ್ಲಿ ಹೋಗುವಾಗ ಸಹ ತಮಿಳುನಾಡಿನಲ್ಲಿ ಇಲ್ಲದಿದ್ದರೆ ಮಹಾರಾಷ್ಟ್ರ ಇಲ್ಲವೆ ಆಂಧ್ರದಲ್ಲಿ ಹಾಕಿಕೊಂಡು ಈ ಕಡೆ ಪಾಸ್ ಆಗುತ್ತಾರೆ. ಆದ್ದರಿಂದ ಅದಕ್ಕೆ ಸರಿಯಾಗಿ ಹೊಂದಿಕೆಯಾಗುವಂತೆ ದರವನ್ನು ಟ್ಯಾಕ್ಸ್‌ನ್ನು ಕಡಿಮೆ ಮಾಡುತ್ತೀರಾ ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಕಳೆದ ವಿಧಾನಸಭಾ ಅಧಿವೇಶನದ ಸಂದರ್ಭದಲ್ಲಿ...

ಶ್ರೀ ಆರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಪೆಟ್ರೋಲ್ ಮತ್ತು ಡೀಸೆಲ್‌ಗೆ ಸಂಬಂಧಪಟ್ಟಂತೆ.

ಶ್ರೀ ಡಿ.ಕೆ. ಶಿವಕುಮಾರ್ : ಪೆಟ್ರೋಲ್, ಡೀಸೆಲ್ ಬಗ್ಗೆ ಏನಾದರೂ ಚರ್ಚೆಗೆ ಅವಕಾಶ ಕೊಟ್ಟಿದ್ದೀರ?

ಶ್ರೀ ಆರಗಜ್ಞಾನೇಂದ್ರ : ಇಲ್ಲ ಮಾನ್ಯ ಅಧ್ಯಕ್ಷರೆ..

ಶ್ರೀ ಡಿ.ಕೆ. ಶಿವಕುಮಾರ್ : ಆಯಿತು, ಮಾತನಾಡಿ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಬಿ.ಜೆ.ಪಿ. ಯವರು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಮಾತನಾಡಲು ನೈತಿಕವಾದ ಹಕ್ಕಿಲ್ಲ. ಅವರ

ಕಾಲದಲ್ಲೇ ಬಹಳ ಹೆಚ್ಚಿಗೆ ಪೆಟ್ರೋಲ್ ಬೆಲೆ ಹೆಚ್ಚಾಗಿರುವುದು. ಆದ್ದರಿಂದ ನಿಮಗೆ ಇದರ ಬಗ್ಗೆ ಮಾತನಾಡಲು ನೈತಿಕ ಹಕ್ಕಿಲ್ಲ ಬೇರೆಯದರ ಬಗ್ಗೆ ಮಾತನಾಡಿ.

ಶ್ರೀ ಆರಗಜ್ಞಾನೇಂದ್ರ : ಹಕ್ಕಿನ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ಆರ್. ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಏನಾದರೂ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಾ

(ಗೊಂದಲ)

ಶ್ರೀ ಸಿ.ಟಿ. ರವಿ : ನೀವು ನಿಮ್ಮ ಅವಧಿಯಲ್ಲಿ ಎಷ್ಟು ಸಲ ಏರಿಸಿದ್ದೀರಿ ಎಂಬ ಬಗ್ಗೆ ಸಹ ಚರ್ಚೆಯಾಗಲಿ. ನೀವು ಆರು ಬಾರಿ ಏರಿಸಿದ್ದೀರಿ.

ಶ್ರೀ ಆರ್. ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಬೆಲೆ ಏರಿಕೆ ವಿಚಾರದಲ್ಲಿ ತಾವೇನಾದರೂ ಚರ್ಚೆಗೆ ಅವಕಾಶ ಮಾಡಿಕೊಟ್ಟೀದ್ದೀರಾ?

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಚರ್ಚೆಗೆ ಅವಕಾಶ ಮಾಡಿಕೊಡಲು ಸಾಧ್ಯವಾಗುವುದಿಲ್ಲ ಸಾಂಕೇತಿಕವಾಗಿ ವಾಟಾಳ್ ನಾಗರಾಜ್ ಮತ್ತು ಅವರ ಸ್ನೇಹಿತರು ಆ ಮೂರು ಜನರು ಈ ವಿಚಾರ ಮಾಡಿದ್ದಾರೆ.

(ಗೊಂದಲ)

ಶ್ರೀ ಆರ್. ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಕ್ಲಾರಿಫಿಕೇಷನ್ ಕೊಡಿ.

ಅಧ್ಯಕ್ಷರು : ಎಲ್ಲಾ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತಾ ಹೋದರೆ ಆಗುವುದಿಲ್ಲ. ಬಿಲ್ಲನ್ನು ತೆಗೆದುಕೊಳ್ಳಬೇಕು, ಪಾಸ್ ಆಗಬೇಕೆಂದು ಬಿ.ಎಸ್.ಸಿ. ಯಲ್ಲಿ ತೀರ್ಮಾನವಾಗಿದೆ. ಅವರು ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಮಧ್ಯಾಹ್ನ ಇದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ನಾನು ಮೊದಲೇ ಹೇಳಿದೆ. ಅದಕ್ಕೆ ನಾನು ಮಧ್ಯಾಹ್ನ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಎಲ್ಲರು ಸಹಕರಿಸಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ..

ಅಧ್ಯಕ್ಷರು : ತಮಗೂ ಅವಕಾಶ ಕೊಡುತ್ತೇನೆ.

ಅಧ್ಯಕ್ಷರ ಅಪ್ಪಣೆಯ ಮೇರೆಗೆ

(ಆ) ವಿಷಯ : ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ವಿರೋಧ ಪಕ್ಷದ ಶಾಸಕರ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿರುವ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ : ಸ್ವಾಮಿ ಅದು ಇರಲಿ. ದಯವಿಟ್ಟು ಸ್ವಲ್ಪ ಕೇಳಿ. ಕಳೆದ ವಿಧಾನಸಭೆಯ ಅಧಿವೇಶನದ ಸಂದರ್ಭದಲ್ಲಿ calling attention ಹಾಕಿ ತಮ್ಮ ಗಮನ ಸೆಳೆದಿದ್ದೆ. ಆಗ ಗೌರವಾನ್ವಿತ ಮುಖ್ಯಮಂತ್ರಿಯವರು "ನಿಮ್ಮ